ಅವತ್ತು ಕಾಟ್ಮಾರಯ್ಯ ರವಷ್ಟು ಲಳೀವಾದವನಂತೆ ಕಂಡರೂ ಮನೆಯನ್ನೂ, ಅಲ್ಲಿನ ಎಲ್ಲದನ್ನೂ ದಿಟ್ಟಿಸುತ್ತಿದ್ದ ಪರಿಗೆ, 'ಅಯ್ಯೋ ಇದ್ಯಾಕೆ ಹಿಂಗೆ ಹೊಸ್ದಾಗಿ ನೋಡ್ತಿರೋನಂಗೆ ನೋಡ್ತಿದೀಯಾ, ತಿಂಡಿ ಆಗ್ಯೆತೆ ತಿನ್ನೀವಂತೆ ಬಾ' ಅಲುಗಾಡಿಸಿದ ಸಣ್ಮಾದಮ್ಮಳನ್ನೂ ಅಪರಿಚಿತಳಂತೆ ನೋಡಿದ. 'ಇದು ಕುರ್ತೇಟು ಯಾರ್ದೋ ಕೈವಾಡ, ಇದುನ್ನ ಕೀಳುಸ್ದೇ ಹೋದ್ರೆ...' ಸಣ್ಮಾದಮ್ಮನ ಎಂದಿನ ಆತಂಕ ಮತ್ತೊಮ್ಮೆ ಮರುಕಳಿಸಿ ಮಗನಿಗದನ್ನು ತಟಾಯಿಸಿದಳು. 'ನಿಂಗೆಲ್ಲೋ ಭ್ರಾಂತು, ಹಂಗಾಗಿದ್ರೆ ಆಗ್ಲೊರ್ಗ್ಲಾ ಮಾಟ ಮಾಡ್ಸೇ ಸಾಯಾಕ್ತಿದ್ರು' ರೋಸಿದವನಂತೆ ಚಿಕ್ಬಸವ ರೇಗಿದ. ಆದರೂ ಮಗ ಗಂಡನನ್ನು ಆಸ್ಪತ್ರೆಗೊಯ್ಯುವ ತಯಾರಿಯಲ್ಲಿದ್ದುದ ಕಂಡು ದಿಗಿಲುಗೊಂಡು, 'ಲೋ ಬಸ್ವಣ್ಣ, ನಾನು ಹೇಳಾದ ವಸಿ ಕೇಳಪ್ಪ, ಗುಡೀಲಿ ಒಂದೆಲ್ಡು ದಿನ ಉಳ್ಸಿ ಮಾಟ ಕೀಳಿಸಿದ್ರೆ ಎಲ್ಲಾ ನೇರೂಪಾಗುತ್ತೆ' ಅಂತ ಅಂಗಲಾಚಿದಳು. 'ನಿಂಗೆ ಇದ್ಯಲ್ಲಾ ತಿಳಿವಲ್ದು ಸುಮ್ಕಿರವ್ವ' ಚಿಕ್ಬಸವ ಕೊಂಚ ಸಾವಧಾನದಿಂದ ಅನ್ನುತ್ತಲೇ, 'ಇವ್ನಿಗೇಳೋದೂ ಒಂದೇ, ಕಲ್ಗೆ ತಲೆ ಚಚ್ಕಣಾದೂ ಒಂದೇ' ಅಂದುಕೊಂಡ ಸಣ್ಮಾದಮ್ಮ, ಮಂದೇವರಿಗೆ ಕೈ ಮುಗಿದು ಹರಕೆ ಕಟ್ಟಿಕೊಂಡಳು.

ಡಾಕ್ಟರು ನೋಡುವ ಹೊತ್ತಿಗೆ ಇಳಿ ಹೊತ್ತಾಗಿತ್ತು. 'ಇದು ಏಕ್ದಂ ವಾಸಿ ಆಗೂವಂಥಾದ್ದಲ್ಲ, ಅಜ್ಜ ಯಾವುದನ್ನೋ ತೀರಾ ಮನಸಿಗೆ ಹಚ್ಚಿಕೊಂಡಿದಾರೆ. ಅದೇನೂಂತ ನೀವೇ ಪತ್ತೆ ಹಚ್ಚಿ ಘಾಸಿಯಾಗದಂಗೆ ನೋಡಿಕೋಬೇಕು ಅಷ್ಟೇ' ಅಂತಂದು ಒಂದು ಇಂಜೆಕ್ಷನ್ ಕೊಟ್ಟು, ಒಂದಷ್ಟು ಮಾತ್ರೆಗಳನ್ನು ಬರೆದುಕೊಟ್ಟರು. ಅದಕ್ಕಾಗೇ ಕಾಯುತ್ತಿದ್ದವಳಂತೆ, 'ನಾನು ಹೇಳ್ಲಿಲ್ವ ಮಗಾ, ಇದು ಆಸ್ಪತ್ರೇಲಿ ವಾಸಿಯಾಗೋ ಕಾಯ್ಲೆ ಅಲ್ಲ ಅಂತಾವ' ಅಲ್ಲೇ ಇದ್ದ ಸಣ್ಮಾದಮ್ಮ ಗೆದ್ದ ಭಾವದಲ್ಲಿ ಮಾತೆಸೆದಳು. ಇದಕ್ಕೆ ಇಂಬುಕೊಡುವಂತೆ ಬೆಳಗಿನಿಂದ ತುಟಿ ಬಿಚ್ಚದಿದ್ದ ಕಾಟ್ಮಾರಯ್ಯ ದಿಢೀರನೆ, 'ನನ್ನುಸ್ರು ನಮ್ಮೂರಾಗೇ ಹೋಗಂಗೆ ಮಾಡಿ ಪುಣ್ಯ ಕಟ್ಕೊಳಪ್ಪ' ಅಂದುಬಿಟ್ಟ. ಗಂಡನ ಮಾತು ಕೇಳುತ್ತಲೇ ಸಣ್ಮಾದಮ್ಮ, 'ಅಯ್ಯೋ ಸಿವ್ನೆ ಬಿಡ್ತು ಅನ್ನು, ಎಂಥ ಮಾತೂಂತ ಆಡ್ತೀಯಾ' ಅನ್ನುತ್ತಾ ಒಂದೇಟಿಗೇ ಹನಿಗಣ್ಣಾದಳು. 'ಈಗ ತೀರಾ ಹಟ ಹಿಡ್ಯಾದು ಬ್ಯಾಡ, ಅವ್ರು ಹೇಳ್ದಂಗೂ ಮಾಡಾನಾ, ಹಂಗೇ ಆಸ್ಪತ್ರೆಗೂ ತೋರುಸ್ತಿರಾನಾ' ಚಿಕ್ಬಸವನನ್ನು ವಾರಾಸಿಗೆ ಕರೆದೊಯ್ದು ಅಂದಳು ನಾಗು. ಚಿಕ್ಬಸವನಿಗೂ ಅದೇ ಪಾಡೆನಿಸಿ ಮಾರನೆಯ ದಿನ ಊರಿಗೋಗುವ ತೀರ್ಮಾನ ಮಾಡಿಕೊಂಡ.

## 6

ಚಿಕ್ಬಸವ ತನ್ನ ಯಜಮಾನನಿಂದ ಒಂದಷ್ಟು ಕಾಸು ಇಸುಕಂಡು, ಊರಿಗೆ ಕಾರು ತಗಂಡು ಹೋಗಲು ಒಪ್ಪಿಸಿ, ಅವತ್ತು ರಾತ್ರಿ ಕಾರನ್ನು ತನ್ನ ಮನೆಯ ಹತ್ತಿರವೇ ನಿಲ್ಲಿಸಿಕೊಂಡ. ಕಾಟ್ಮಾರಯ್ಯನ ಹಲ್ವಾಟ ಎಂದಿಗಿಂತ ತುಸು ಹೆಚ್ಚಾಗಿದ್ದಲ್ಲದೆ, ಸರೊತ್ತಿನಲ್ಲೊಮ್ಮೆ ಬೆಚ್ಚಿದವನಂತೆ ದಡಕ್ಕನೆದ್ದು, 'ಯಾಕೋ ಉಸ್ರು ಕಟ್ದಂಗೆ ಆಗ್ತಾಯ್ತೆ' ಅಂತ ಬಾಗಿಲು ತಕ್ಕಂಡು ಆಚೆ ಓಡಿಬಿಟ್ಟಿದ್ದ. ಚಿಕ್ಬಸವನೂ ಹಿಂದೇ ಓಡಿ ಕರೆತಂದು, 'ನಾಳಿಕೆ ಊರ್ಗೆ ಕರ್ಕಂಡೋಗ್ತೀನಿ, ಇನ್ಮೇಲೆ ನೀವಿಬ್ರೂ ಅಲ್ಲೇ ಇರೀವ್ರಂತೆ' ಅಂದ. ಅದಕ್ಕೆ ಕಾಟ್ಮಾರಯ್ಯ ಕಮಕ್‌ಕಿಮಕ್ ಅನ್ನಲಿಲ್ಲ. ಸಣ್ಮಾದಮ್ಮ ಮಾತ್ರ ಊರಿಗೆ ಹೋಗುತ್ತಲೇ ಮಾಡಬೇಕಾದವುಗಳ ಲೆಕ್ಕಾಚಾರದಲ್ಲಿ ಮುಳುಗಿದ್ದಳು.

ಮನೆಯವರೆಲ್ಲಾ ಬೇಗನೆದ್ದು ಹೊರಡುವ ತರಾತುರಿಯಲ್ಲಿದ್ದರೆ, ಕಾಟ್ಮಾರಯ್ಯ ಅದಾವ ಮಾಯದಲ್ಲೋ ಆಚೆ ಹೋಗಿ ಮಿನಿ ವಾಟರ್ ಟ್ಯಾಂಕಿನ ಬಳಿ ನೀರಿಗಾಗಿ ಹುಟ್ಟಿಕೊಂಡಿದ್ದ ಕಿತ್ತಾಟವನ್ನೇ ದಿಟ್ಟಿಸುತ್ತಿದ್ದ. ಕಾಟ್ಮಾರಯ್ಯನನ್ನು ಕರಕಂಡು ಬಂದ ಚಿಕ್ಬಸವ, 'ಹೊರ್ಡಾನಾ ಈಗ' ಅಂದ. 'ಉಕ್ಕದ್ಕೆ ನೀರ್ಬಿಟ್ಟಂಗೆ' ಅಂದ ಕಾಟ್ಮಾರಯ್ಯ ನಿರ್ಭಾವುಕನಾಗಿ. 'ಕೇಳ್ತೇನಪ್ಪ' ಅಪ್ಪನೆದುರು ಕುಕ್ಕುರುಗಾಲಲ್ಲಿ ಕೂತು ಮತ್ತೆ ಅಂದ. 'ಅಬ್ಬಾ ಅಲ್ನೋಡು ಆ ಹೊಲ್ಗುಳು ಹೆಂಗೆ ಹಸ್ರು ಕಕ್ತಾದಾವೆ, ಗೌರಿ ಹಬ್ಬುಕ್ಕೆಲ್ಲಾ ಗರೀಗೆ ಬಂದುಬಿಡ್ತಾವೆ', 'ಯಾಕಪ್ಪ ಏನೇನೋ ಮಾತಾಡ್ತೀಯ' ಅನ್ನುತ್ತಾ